# ನಗರಸಭಾ ಕಾರ್ಯಾಲಯ, ತುಮಕೂರು

ನಂ.ನಸತು:ತಾಂಶಾ/ಟೆಂಡರ್/ಸಿಆರ್/74/2007–08 ದಿನಾಂಕ 13–07–2007.

## ಮರು ಟೆಂಡರ್ ಪ್ರಕಟಣೆ

ತುಮಕೂರು ನಗರಸಭಾ ವ್ಯಾಪ್ತಿಯಲ್ಲಿ ಶೇಕಡ 18ರ ಹಾಗೂ ಎಸ್.ಎಫ್.ಸಿ. ಅನುದಾನದಲ್ಲಿ ಕಟ್ಟಡ ಹಾಗೂ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆಧ್ಯಾದೇಶ 2000 ರಂತೆ ಹಾಗೂ ಲೋಕೋಪಯೋಗಿ ಇಲಾಖೆ ಸಂಹಿತೆ ಭಾಗ–11 ಪಿಡಬ್ಲ್ಯೂಜಿ–65 ಮತ್ತು 66 ನಿಬಂಧನೆಗೊಳಪಟ್ಟು ಅರ್ಹ ದರ್ಜೆಯ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಗುತ್ತಿಗೆದಾರರುಗಳಿಂದ ನಿಗದಿಪಡಿಸಿದ ನಮೂನೆಗಳಲ್ಲಿ ಮೊಹರು ಮಾಡಲಾದ ಲಕೋಟೆಯ ಮೇಲೆ ಕಾಮಗಾರಿಯ ಹೆಸರನ್ನು ನಮೂದಿಸಿದ ಶೇಕಡವಾರು / ಐಟಂವಾರು ಟೆಂಡರ್‌ಗಳನ್ನು ದ್ವಿಪತ್ರಿಯಲ್ಲಿ ಪೌರಾಯುಕ್ತರು, ನಗರಸಭೆ, ತುಮಕೂರು ಇವರಿಗೆ ಸಲ್ಲಿಸಲು ಆಹ್ವಾನಿಸಲಾಗಿದೆ.

1. ಟೆಂಡರ್ ಹಾಕಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್ ದಾಖಲಾತಿಗಳಿಗಾಗಿ ದಿನಾಂಕ 13–07–2007 ರಿಂದ 14–08–2007ರವರೆಗೆ ಕಛೇರಿ ವೇಳೆಯಲ್ಲಿ ಅರ್ಜಿಯನ್ನು ಕಾಮಗಾರಿಗೆ ನಿಗದಿಪಡಿಸಿದ ಅರ್ಜಿ ಶುಲ್ಕವನ್ನು ಪಾವತಿ ಮಾಡಿ ಪಾರಾಯುಕ್ತರು, ನಗರಸಭೆ, ತುಮಕೂರು ರವರಿಗೆ ಸಲ್ಲಿಸಬಹುದಾಗಿದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.
2. ಟೆಂಡರ್ ಫಾರಂಗಳನ್ನು ನೀಡುವ ದಿನಾಂಕ 13–07–2007 ರಿಂದ 14–08–2007ರವರೆಗೆ ಕಛೇರಿಯ ವೇಳೆಯಲ್ಲಿ ಅರ್ಹ ಗುತ್ತಿಗೆದಾರರಿಗೆ ನೀಡಲಾಗುವುದು.
3. ಭರ್ತಿ ಮಾಡಿದ ಫಾರಂಗಳನ್ನು ದಿನಾಂಕ 14–08–2007 ರಂದು 4.30 ಗಂಟೆಯೊಳಗಾಗಿ ಪೌರಾಯುಕ್ತರು, ನಗರಸಭೆ, ತುಮಕೂರು ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಅಥವಾ ಮಾನ್ಯ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ರವರ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಹಾಕಬಹುದಾಗಿದೆ.
4. ಟೆಂಡರ್ ಫಾರಂಗಳನ್ನು ಸಾಧ್ಯವಾದರೆ ಅಂದೇ ಅಥವಾ ಮರುದಿನ ಕಛೇರಿ ವೇಳೆಯಲ್ಲಿ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು.
5. ಹೆಚ್ಚಿನ ಮಾಹಿತಿಗಾಗಿ ಹಾಗೂ ಟೆಂಡರ್ ಷರತ್ತುಗಳಿಗೆ ವೆಬ್‌ಸೈಟ್: www.tumkurcity.gov.in ಹಾಗೂ ನಗರಸಭೆ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.
6. ಕ್ರಮ ಸಂಖ್ಯೆ 1 ರಿಂದ 3 ರವರೆಗಿನ ಕಾಮಗಾರಿಗಳು ಶೇಕಡವಾರು ಹಾಗೂ 4 ರಿಂದ 6 ರವರೆಗಿನ ಕಾಮಗಾರಿಗಳು ಐಟಂವಾರು ಟೆಂಡರ್‌ಗಳಾಗಿರುತ್ತವೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ಲಕ್ಷ ರೂ. ಗಳಲ್ಲಿ | ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ (ರೂ ಲಕ್ಷಗಳಲ್ಲಿ) | ಇಎಂಡಿ ಮೊತ್ತ (ರೂ.ಗಳಲ್ಲಿ) | ಅರ್ಹ ದರ್ಜೆ ಗುತ್ತಿಗೆದಾರರ | ಟೆಂಡರ್ ಫಾರಂ ಬೆಲೆ+ ತೆರಿಗೆ (ಹಿಂದಿರುಗಿ ಸುವುದಿಲ್ಲ) | ಕಾಮಗಾರಿ ಪೂರ್ಣಗೊಳಿಸಲು ಕಾಲಾವಧಿ |
|---|---|---|---|---|---|---|---|
| 1 | ಎಸ್.ಆರ್.ಕಾಲೋನಿಯಲ್ಲಿ ಹಳೆ ಭಜನೆ ಮನೆ ಹತ್ತಿರ ಸಮುದಾಯ ಭವನ ನಿರ್ಮಾಣ ಕಾಮಗಾರಿ. | 2.60 | 2.60 | 6500–00 | 3ನೇ ದರ್ಜೆ ಮತ್ತು ಮೇಲ್ಪಟ್ಟು | 500 + ತೆರಿಗೆ | ಮಳೆಗಾಲ ಸೇರಿ ಆರು ತಿಂಗಳು |
| 2 | ಎಸ್.ಎಲ್.ಎನ್. ನಗರ 3–4 ಮತ್ತು 5ನೆ ಕ್ರಾಸ್‌ನಲ್ಲಿ ಡಾಂಬರ್ ರಸ್ತೆ ನಿರ್ಮಾಣ ಕಾಮಗಾರಿ. | 4.40 | 4.40 | 11000–00 | --"-- | 500 + ತೆರಿಗೆ | --"-- |
| 3 | 34ನೇ ವಾರ್ಡ್‌ನ ಇಂದಿರಾ ನಗರದ ಅಂಗನವಾಡಿ ಕಟ್ಟಡದ | 0.50 | 0.50 | 1250–00 | 4ನೇ ದರ್ಜೆ | 250 + ತೆರಿಗೆ | --"-- |

| | | | | | | | |
|---|---|---|---|---|---|---|---|
| | ಹೆಚ್ಚುವರಿ ಕಾಮಗಾರಿ. | | | | ಮತ್ತು ಮೇಲ್ಪಟ್ಟು | | |
| 4 | ಅಮಾನಿಕೆರೆ ಕೇಂದ್ರಯ ವಿದ್ಯಾಲಯ ರಸ್ತೆಗೆ ಡೆಕ್‌ಸ್ಲಾಬ್ ನಿರ್ಮಾಣ ಕಾಮಗಾರಿ. ಮತ್ತು ಕೆ.ಆರ್.ಬಡಾವಣೆಯ 1ನೇ ಕ್ರಾಸ್ ಅಭಿವೃದ್ಧಿ. | 6.50 | 6.50 | 13,000.00 | 3ನೇ ದರ್ಜೆ ಮತ್ತು ಮೇಲ್ಪಟ್ಟು | 1000 + ತೆರಿಗೆ | --''-- |
| 5 | 34ನೇ ವಾರ್ಡ್‌ನ ಬಸವೇಶ್ವರ ನಗರದ 3ನೇ ಮತ್ತು 4ನೇ ಅಡ್ಡ ರಸ್ತೆಗಳ ಅಭಿವೃದ್ಧಿ ಮತ್ತು ಡಾಂಬರೀಕರಣ | 10.00 | 10.00 | 20,000.00 | --''-- | 1000 + ತೆರಿಗೆ | --''-- |
| 6 | ಕೆ.ಆರ್. ಬಡಾವಣೆ ಅಡ್ಡ ರಸ್ತೆ ಮತ್ತು ಬಿದಿರುಮಳೆ ತೋಟದ ಮುಖ್ಯ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ | 10.00 | 10.00 | 20,000.00 | --''-- | 1000 + ತೆರಿಗೆ | --''-- |

ಸಹಿ/-
(ಎಸ್.ಆರ್.ಉಮಾಶಂಕರ್ ಭಾ.ಆ.ಸೇ)
ಆಡಳಿತಾಧಿಕಾರಿಗಳು
ನಗರಸಭೆ, ತುಮಕೂರು

ಸಹಿ/-
(ಅಬ್ದುಲ್ ಖಯ್ಯೂಂ ಕೆ.ಎಂ.ಎ.ಎಸ್)
ಪೌರಾಯುಕ್ತರು
**ನಗರಸಭೆ, ತುಮಕೂರು.**